



# ಅದ್ಭುತ ಹಲ್ಲಿ ಮನುಷ್ಯ!

ಇವನಿಗೆ ಹಲ್ಲಿಗಳಂತೆ ಬದುಕುವ ಆಸೆ! ಈಗ ಟೆಕ್ಸಾಸ್‌ನ ಆಸ್ಟಿನ್ ನಿವಾಸಿಯಾಗಿರುವ ಎರಿಕ್ ಸ್ಪ್ರೇ ಹಲ್ಲಿಗಳ ಆಕಾರ ಪಡೆಯಲು ಶತಪ್ರಯತ್ನ ಮಾಡಿದ್ದಾನೆ.

ಮೈತುಂಬ ಹಸಿರು ಹಚ್ಚೆಗಳು, ಎರಡು ಟಿಸಿಲಾದ ನಾಲಗೆ, ಚೂಪಾದ ಹಲ್ಲುಗಳು, ದೊಡ್ಡ ಕಿವಿಯ ಹಾಲೆಗಳು.. ಹೀಗೆ ಹಲವಾರು ದೇಹದ ಮಾರ್ಪಾಡುಗಳನ್ನು ಮಾಡಿಕೊಂಡು ಅದ್ಭುತವಾಗಿ ಪ್ರದರ್ಶನ ಮಾಡುತ್ತಾನೆ. ಬಾಲವನ್ನೂ ಕೂಡ ಕಸಿ ಮಾಡಿಸಿ ಕೊಳ್ಳುತ್ತಾನೆ ಎಂಬ ವದಂತಿ ಇತ್ತೀಚೆಗೆ ಹರಡಿತ್ತು. ಆದರೆ ಅದು ಸಾಧ್ಯವಿಲ್ಲವೆಂದು ಸ್ವತಃ ಎರಿಕ್ ಅಲ್ಲಗಳೆದಿದ್ದಾನೆ.

ಜಗತ್ತಿನಾದ್ಯಂತ ಎರಿಕ್ ಪ್ರದರ್ಶನ ನೀಡಿದ್ದಾನೆ. ಹಲವಾರು ಟೀವಿ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದಾನೆ. ಈತ ಇನ್ನೂ ಹಲವಾರು ಪ್ರದರ್ಶನ ನೀಡುತ್ತಾನೆ; ಬೆಂಕಿ ನುಂಗುವುದು, ಖಡ್ಗ ಜಗಿದು ನುಂಗುವುದು, ಹುಳುಗಳನ್ನು ತಿನ್ನುವುದು ಇತ್ಯಾದಿ... ಇವನದೇ ಆದ ರಾಕ್ ಬ್ಯಾಂಡ್ ಉಂಟು. ದೇಹದ ಮಾರ್ಪಾಡಿನ ಕುರಿತು ಲೇಖನಗಳನ್ನು ಬರೆದಿರುವ ಎರಿಕ್ ಅಲ್ಬನಿ ವಿಶ್ವವಿದ್ಯಾಲಯದ ಡಾಕ್ಟರೇಟ್ ಪಡೆದಿದ್ದಾನೆ ಎಂದರೆ ನಂಬಲಾಗುವುದಿಲ್ಲ!

ಪತ್ನಿ ಮೇಘನ್ ಮತ್ತು ಮುದ್ದು ಗಿಣಿಗಳೊಂದಿಗೆ ಆಸ್ಟಿನ್‌ನಲ್ಲಿ ಎರಿಕ್ ವಾಸಿಸುತ್ತಿದ್ದಾನೆ.

■ ಪ್ರಕಾಶ್ ಎಸ್. ಮನ್ನಂಗಿ





